ವಿನೀತ್ ಬಾಜಪೇಯಿ

# ಹರಪ್ಪ

## ನೆತ್ತರ ನದಿಯ ಶಾಪ

ವಿನೀತ್ ಬಾಜಪೇಯಿ



# ಪರಿಚಯ

**ನವದೆಹಲಿ, ಕ್ರಿ.ಪೂ. 2017**

ದೆಹಲಿಯ ಯುವ ಉದ್ಯಮಿ ವಿದ್ಯುತ್ ಶಾಸ್ತ್ರಿಗೆ ಕಾಶಿಯಿಂದ ಒಂದು ಅನಿರೀಕ್ಷಿತ ಕರೆ ಬಂದಿತು. ಕಾಶಿಯಲ್ಲಿದ್ದ 108 ವರ್ಷ ವಯಸ್ಸಿನ ಅವನ ಮುತ್ತಾತ ಮರಣಶಯ್ಯೆಯಲ್ಲಿ ಮಲಗಿದ್ದರು. ಕಾಶಿಯ ಮಠವೊಂದರಲ್ಲಿ ಮಠಾಧ್ಯಕ್ಷರಾಗಿದ್ದ ಅವರು ತಮ್ಮ ಮರಿಮೊಮ್ಮಗ ವಿದ್ಯುತ್ ಶಾಸ್ತ್ರಿಗೆ ಇತಿಹಾಸ ಪೂರ್ವದ ಒಂದು ಭೀಕರ ಶಾಪದ ರಹಸ್ಯವನ್ನು ಕುರಿತು ತುರ್ತಾಗಿ ಹೇಳಬೇಕಿತ್ತು. ಆ ಭೀಕರ ಶಾಪ ಸಾವಿರಾರು ವರ್ಷಗಳ ಹಿಂದೆ ಒಂದು ಇಡೀ ನಾಗರಿಕತೆಯನ್ನು ನಾಶ ಮಾಡಿತ್ತಲ್ಲದೇ ಆ ವಿನಾಶದ ಹಿಂದಿದ್ದ ಸತ್ಯವನ್ನೂ ಪೂರ್ತಿಯಾಗಿ ಅಳಿಸಿ ಹಾಕಿತ್ತು.

ಆ ಸತ್ಯವೇನೆಂಬುದು ಇಂದಿನ ತನಕ ಬಯಲಾಗಿಲ್ಲ.

ಮರಣಶಯ್ಯೆಯಲ್ಲಿ ಮಲಗಿದ್ದ ದ್ವಾರಕಾ ಶಾಸ್ತ್ರಿ ಕಾಶಿಯ ಶಿವಮಂದಿರದಲ್ಲಿನ ಒಂದು ಶಿವಮಂದಿರದಲ್ಲಿನ ಒಂದು ನಿಗೂಢ ಕೋಣೆಯನ್ನು ಕಾಪಾಡಿಕೊಂಡು ಬಂದಿರುವ ಪರಂಪರೆಯ ಕಟ್ಟಕಡೆಯ ಕೊಂಡಿಯಾಗಿದ್ದರು. ಆ ಮಠದ ಒಂದು ರಹಸ್ಯ ತಾಣದಲ್ಲಿ 3500 ವರ್ಷಗಳಷ್ಟು ಹಳೆಯ ತಾಳೆಗರಿಯನ್ನು ಸಂಗ್ರಹಿಸಲಾಗಿತ್ತು.

ಸಂಸ್ಕೃತ ಛಂದಸ್ಸಿನಲ್ಲಿದ್ದ ಆ ಪದ್ಯಬರೆಹದಲ್ಲಿ “ಹುಣ್ಣಿಮೆಯ ದಿವಸ ರೋಹಿಣೀ ನಕ್ಷತ್ರದ ಒಂದು ಶುಭ ಮುಹೂರ್ತದಂದು ಈ ಪೀಠಾಧಿಪತಿಗಳ ವಂಶಜನೂ, ತನ್ನ ಪೂರ್ವಿಕರ ಪಾಪದಿಂದ ಲೇಪಿತನಲ್ಲದವನೂ ಆದ ಪುಣ್ಯಾತ್ಮನೊಬ್ಬ ಈ ನಿಗೂಢ ರಹಸ್ಯವನ್ನು ಅರಿಯಲಿದ್ದಾನೆ, ಅರಿವುದಷ್ಟೇ ಅಲ್ಲ, ಮನುಷ್ಯ ಇತಿಹಾಸ ಹಿಂದೆಂದೂ ಕಂಡರಿಯದ ಆ ಭಯಂಕರ ಶಾಪವನ್ನು ಶಾಶ್ವತವಾಗಿ ತೊಲಗಿಸಲಿದ್ದಾನೆ” ಎಂದು ಸಹ ಬರೆಯಲಾಗಿತ್ತು.

ವಿದ್ಯುತ್‌ಗೆ ತನ್ನ ಮುತ್ತಾತನಿಂದ ಕರೆ ಬರಲು ಮತ್ತೊಂದು ಕಾರಣವಿತ್ತು.

ಅಂದು ಆ ಶುಭ ಮುಹೂರ್ತ ಸನ್ನಿಹಿತವಾಗಿತ್ತು.

ಅವನ ವಂಶಜರನ್ನು ಕಾಡುತ್ತಿದ್ದ ಆ ಪುರಾತನ ಶಾಪಕ್ಕೆ ಅವನೂ ಬಲಿಯಾಗಬಾರದೆಂಬ ಉದ್ದೇಶದಿಂದ ಅವನ ಮೂರು ತಲೆಮಾರಿನ ಪೂರ್ವಿಕರು ಅವನನ್ನು ಕಾಶಿಯಿಂದ ಬಹುದೂರಕ್ಕೆ ಕರೆದೊಯ್ದು ಅಲ್ಲಿ ಅವನನ್ನು ಬೆಳೆಸಲು ವ್ಯವಸ್ಥೆ ಮಾಡಿದ್ದರು. ಈ ಕೆಟ್ಟ ಶಾಪಕ್ಕೆ ಕಾರಣಕರ್ತರು ಬೇರೆ ಮತ್ತಾರೂ ಅಲ್ಲ, 3700 ವರ್ಷಗಳ ಹಿಂದೆ ಇವನದೇ ವಂಶದಲ್ಲಿ ಜನಿಸಿದ್ದ ವಿವಸ್ವಾನ್ ಪೂಜಾರಿ ತನ್ನದೇ ಜನರಿಗೆ, ತನ್ನದೇ ನಾಗರಿಕತೆಗೆ ದ್ರೋಹವೆಸಗಿದ್ದ. ಈ ಭೂಮಿಯ ಮೇಲಿನ ಮೊತ್ತ ಮೊದಲ ಮಹಾನಗರ ಎನಿಸಿದ ಹರಪ್ಪದ ಸರ್ವನಾಶಕ್ಕೆ ಅವನೇ ಕಾರಣಕರ್ತನಾಗಿದ್ದ.

ಜೀವನದಿ ಎಂದೇ ಹೆಸರುವಾಸಿಯಾಗಿದ್ದ ನದಿಯಲ್ಲಿ ನೆತ್ತರು ಹರಿಯುವಂತೆ ಮಾಡಿದ್ದಂತೂ ಅವನೆಸಗಿದ ಅಕ್ಷಮ್ಯ ಅಪರಾಧವಾಗಿತ್ತು.

ಹರಪ್ಪ ಕ್ರಿ.ಪೂ. 1700:

ಹರಪ್ಪ ವೈದಿಕ ಜೀವನ ಪದ್ಧತಿಯನ್ನು ಅನುಸರಿಸುತ್ತಿದ್ದ ಈ ಭೂಮಿಯ ಮೇಲಿನ ಅತ್ಯಂತ ಪ್ರಭಾವೀ ನಗರವಾಗಿತ್ತು. ಆರ್ಯಾವರ್ತದಲ್ಲೇ ಅತ್ಯಂತ ಶಕ್ತಿಶಾಲಿ ನಗರ ಎನಿಸಿತ್ತು. ಆರ್ಯಾವರ್ತದ ಅತ್ಯಂತ ಪ್ರತಿಷ್ಠಿತ ಸ್ಥಾನವಾಗಿದ್ದ ಹರಪ್ಪದ ಮುಖ್ಯ ಪುರೋಹಿತ ಸ್ಥಾನಕ್ಕೆ ವಿವಸ್ವಾನ್ ಪೂಜಾರಿ ನಾಮನಿರ್ದೇಶಿತನಾಗಿದ್ದ. ಇಂಥದೊಂದು ಸ್ಥಾನಮಾನವನ್ನು ಸಂಪಾದಿಸಲು ಅವನು ಸುಮಾರು ಅರ್ಧಶತಮಾನದ ಕಾಲ ಸತತವಾಗಿ ಸಾಧನೆ ಮಾಡಿದ್ದ.

ಇನ್ನೇನು ಅವನ ಹೆಸರನ್ನು ಸಾರ್ವಜನಿಕವಾಗಿ ಘೋಷಿಸಬೇಕು ಎನ್ನುವಷ್ಟರಲ್ಲಿ ಒಂದು ಅನಾಹುತ ನಡೆದು ಹೋಯಿತು.

ಒಂದು ಕಾಲದಲ್ಲಿ ವಿವಸ್ವಾನ್ ಪೂಜಾರಿಯ ಪರಮಾಪ್ತನಾಗಿದ್ದ ಪಂಡಿತ ಚಂದ್ರಧರ ತರುವಾಯ ಅವನ ಪ್ರತಿಸ್ಪರ್ಧಿಯಾದ. ಅವನು ಅನುಪಮ ಚೆಲುವೆಯಾಗಿದ್ದ ತನ್ನ ಪತ್ನಿಯೊಂದಿಗೆ ಸೇರಿಕೊಂಡು ಕಣ್ಣುಗುಡ್ಡೆಗಳೇ ಇರದಿದ್ದ ಮೂವರು ಮಾಂತ್ರಿಕರನ್ನು ಮೆಸಪಟೋಮಿಯಾದಿಂದ ಕರೆಸಿ ಆ ಮೂವರ ನೆರವಿನಿಂದ ದುಷ್ಟಶಕ್ತಿಗಳನ್ನು ಆವಾಹನೆ ಮಾಡಿದ. ರಾಜನರ್ತಕಿ ನಯನತಾರಾಳನ್ನು ಬರ್ಬರವಾಗಿ ಹತ್ಯೆ ಮಾಡಿದ ಕೊಲೆಗಾರ ಎಂಬ ಮಿಥ್ಯಾರೋಪಕ್ಕೆ ವಿವಸ್ವಾನ್ ಪೂಜಾರಿ ಗುರಿಯಾಗುವಂತೆ ಇಬ್ಬರೂ ಸೇರಿಕೊಂಡು ಕುತಂತ್ರ ಮಾಡಿದರು. ಅದ್ಭುತ ನರ್ತಕಿಯಾಗಿದ್ದ ನಯನತಾರಾ ತನ್ನ ವಿಚಿತ್ರ ವೇಷಭೂಷಣಗಳಿಗೆ ಹೆಸರುವಾಸಿಯಾಗಿದ್ದಳು. ಅವಳು ನರ್ತಿಸುವಾಗ ಬಳೆಯನ್ನು ಮುಂಗೈಯ ಮಣಿಕಟ್ಟಿನಿಂದ ಹಿಡಿದು ಭುಜದ ತುದಿಯವರೆಗೂ ಧರಿಸುತ್ತಿದ್ದಳು. ತನಗೆ ಅತ್ಯಂತ ಆಪ್ತರಾದ ಹಾಗೂ ಗಣ್ಯರಾದ ಅತಿಥಿಗಳ ಎದುರಲ್ಲಿ ಮಾತ್ರ ಅವಳು ಹೀಗೆ ವಿಲಕ್ಷಣ ವೇಷ ಧರಿಸಿ ನರ್ತಿಸುತ್ತಿದ್ದಳು.

ಇಂಥವಳನ್ನು ಕೊಂದ ಆರೋಪಕ್ಕೆ ಗುರಿಯಾಗಿದ್ದ ವಿವಸ್ವಾನ್ ಪೂಜಾರಿಯ ವಿಚಾರಣೆ ನ್ಯಾಯಾಲಯದಲ್ಲಿ ಸಮಸ್ತ ಸಾರ್ವಜನಿಕರ ಸಮ್ಮುಖದಲ್ಲಿ ನಡೆಯಿತು. ವಿಚಾರಣೆಯೆಲ್ಲ ಮುಗಿದ ಮೇಲೆ ಅವನನ್ನು ಮೃತ ಕಾರಾವಾಸ ಎಂದು ಕರೆಯಲಾಗುವ ಕಗ್ಗತ್ತಲೆಯ ಸೆರೆಮನೆಯೊಳಗೆ ಶಾಶ್ವತವಾಗಿ ಬಂಧಿಸಿಡಬೇಕೆಂದು ತೀರ್ಪು ನೀಡಲಾಯಿತು. ಈ ಕಾರಾಗೃಹದಲ್ಲೇ ಅವನು ಸೇಡಿನ ಕರಾಳ ಪ್ರತಿಜ್ಞೆ ಕೈಗೊಂಡದ್ದು, ಅವನು ಸೇಡು ತೀರಿಸಿಕೊಂಡಿದ್ದು ಚಂದ್ರಧರನ ಮೇಲಲ್ಲ, ಕುಟಿಲೋಪಾಯ ಮಾಡಿದ ಅವನ

ಸಂಗಡಿಗರ ಮೇಲಲ್ಲ, ನಿರಪರಾಧಿಯಾದ ತನ್ನನ್ನು ಘೋರ ಶಿಕ್ಷೆಗೆ ಗುರಿ ಮಾಡಿದ ನ್ಯಾಯಾಧೀಶನ ಮೇಲಾಗಲೀ ಅಥವಾ ಮೆಸಪಟೋಮಿಯಾದ ಮಾಂತ್ರಿಕರ ಮೇಲಾಗಲೀ ಅಲ್ಲ. ಇಡೀ ಹರಪ್ಪ ನಗರದ ಮೇಲೆ ಅವನು ಸೇಡು ತೀರಿಸಿಕೊಂಡ. ಅವನನ್ನು ನದೀತೀರಕ್ಕೆ ಎಳೆದು ತರಲಾಯಿತು, ಅಲ್ಲಿ ನೆರೆದಿದ್ದ ಊರ ಜನ ಅವನ ಮುಖದ ಮೇಲೆ ಉಗುಳಿದರು, ಯಾವ ಜನರ ಏಳಿಗೆಗಾಗಿ ಅವನು ತನ್ನ ಇಡೀ ಆಯುಷ್ಯವನ್ನು ತೇಯ್ದಿದ್ದನೋ ಅದೇ ಜನ ಅಂದು ಅವನನ್ನು ಹೀನಾಮಾನವಾಗಿ ಬೈದರು, ಅವನ ಮೇಲೆ ಕಲ್ಲುತೂರಾಟ ನಡೆಸಿದರು. ಅವನ ಮನೆತನದ ಆಸ್ತಿಪಾಸ್ತಿಯನ್ನೆಲ್ಲ ಲೂಟಿ ಮಾಡಿದರು, ಅವನ ಪ್ರೀತಿಗೆ ಪಾತ್ರರಾಗಿದ್ದ ಅವನ ಕುಟುಂಬದ ಸದಸ್ಯರೆಲ್ಲರೂ ಗೊತ್ತು ಗುರಿ ಇಲ್ಲದೆ ಚೆಲ್ಲಾಪಿಲ್ಲಿಯಾದರು, ಗುಳೆ ಹೋದರು, ದೇಶಭ್ರಷ್ಟರಾಗಿ ಹೋದರು. ಅವನು ಕಗ್ಗತ್ತಲೆಯ ಕೋಣೆಯೊಳಗೆ ಕುಳಿತು ದ್ವೇಷಪೂರಿತವಾಗಿ, ಹೃದಯವಿದ್ರಾವಕವಾಗಿ ರೋದಿಸಿದ, ಆ ಕಪ್ಪು ಗೋಡೆಯ ಮೇಲೆ ತನ್ನದೇ ರಕ್ತದಿಂದ ಪ್ರತೀಕಾರದ ಸಾಲುಗಳನ್ನು ಬರೆದ.

ಪೋರ್ಚುಗಲ್, ಕ್ರಿ.ಶ. 1578

ಪೋರ್ಚುಗಲ್‌ನ ದೊರೆ 5ನೇ ಇಮ್ಯಾನ್ಯುಯಲ್‌ಗೆ ವ್ಯಾಟಿಕನ್ ನಗರದಿಂದ ಒಂದು ಪತ್ರ ಬಂದಿತು. ವ್ಯಾಟಿಕನ್‌ನ ಹಿರಿಯರೇ ಕಳುಹಿಸಿದ್ದ ಪತ್ರವದು. ಒಂದು ಕಹಿಸತ್ಯವನ್ನು ಕುರಿತು ಪ್ರಸ್ತಾಪಿಸಿದ್ದ ಆ ಪತ್ರವು ಒಂದು ವೇಳೆ ಆ ಕಹಿಸತ್ಯ ಬಯಲಾಗಿಬಿಟ್ಟರೆ ಅದರ ಪರಿಣಾಮವಾಗಿ ಇಡೀ ಜಗತ್ತೇ ಶಾಶ್ವತವಾಗಿ ಬದಲಾಗಿಬಿಡುತ್ತದೆ ಎಂಬ ಎಚ್ಚರಿಕೆಯನ್ನು ಒಳಗೊಂಡಿತ್ತು.

ಜೊತೆಗೆ, ಭಾರತದ ಪಶ್ಚಿಮ ಕರಾವಳಿಯ ಒಂದು ಹಳ್ಳಿಯಲ್ಲಿ ಗುಪ್ತವಾಗಿ ಹುದುಗಿರುವ ಆ ಸತ್ಯವನ್ನು ಹೇಗಾದರೂ ಹುಡುಕಿ ಅದನ್ನು ಅಲ್ಲೇ ಇಲ್ಲವಾಗಿಸಿಬಿಡಬೇಕು ಎಂಬ ಸೂಚನೆ ಸಹ ಇತ್ತು. ಒಟ್ಟಿನಲ್ಲಿ ಇದೂ ಕೂಡ ಒಂದಾನೊಂದು ಕಾಲದಲ್ಲಿ ಜೀವನದಿಯ ತೀರದಲ್ಲಿ ಸಮೃದ್ಧವಾಗಿ ಬೆಳೆದು ಈಗ ನಾಶವಾಗಿದ್ದ ನಗರದ ಕುರಿತ ಪ್ರಸ್ತಾಪವೇ ಆಗಿತ್ತು. ಈಗಾಗಲೇ ನಾಶವಾಗಿ ಹೋಗಿರುವ ನಗರದ ಕಥೆ ಇತಿಹಾಸದ ಪುಟಗಳಲ್ಲಿ ಮತ್ತೊಮ್ಮೆ ನಾಶವಾಗಬೇಕಾಯಿತೇ! ನಾಶವಾಗದೇ ಬೇರೆ ವಿಧಿ ಇರಲಿಲ್ಲ. ಚರ್ಚಿನ ಪ್ರತಿಷ್ಠೆ ಮತ್ತು ಅಸ್ತಿತ್ವ ಆ ಸತ್ಯವನ್ನು ಅವಲಂಬಿಸಿತ್ತು. ಯಾವ ಭಯಂಕರ

ಆಯುಧವನ್ನಾದರೂ ಪ್ರಯೋಗಿಸಿ ಆ ಸತ್ಯವನ್ನು ಇಲ್ಲವಾಗಿಸಿಬಿಡು ಎಂದು ಪೋರ್ಚುಗಲ್ಲಿನ ದೊರೆಗೆ ಸೂಚಿಸಲಾಗಿತ್ತು. ಒಡನೆಯೇ ದೊರೆ ಇಮ್ಯಾನ್ಯುಯಲ್ ಇನ್ನೂರು ಸಶಕ್ತ ಯುದ್ಧನೌಕೆಗಳನ್ನು ಭಾರತದ ಅತ್ಯಂತ ಪ್ರಶಾಂತ ನಾಡುಗಳಲ್ಲಿ ಒಂದಾಗಿದ್ದ ಗೋವಾದ ಕಡೆಗೆ ಕಳುಹಿಸಿದ. ತಮ್ಮ ಪ್ರಸಿದ್ಧವಾದ, ಸುರಕ್ಷಿತವಾದ ದೇವಸ್ಥಾನಗಳ ಅಡಿಪಾಯದಲ್ಲಿ ಹುದುಗಿರುವ ಮನುಷ್ಯಕುಲದ ಅತಿದೊಡ್ಡ ರಹಸ್ಯದ ಅವಶೇಷಕ್ಕೆ ಹೊರಲೋಕ ಯಾವ ಬೆಲೆ ಕೊಡುತ್ತಿದೆ ಎಂಬುದು ಅಲ್ಲಿಯ ಸ್ಥಳೀಯರಿಗೆ ಅರ್ಥವಾಗಲಿಲ್ಲ. ಆದರೆ ಭಾರತದ ಇತಿಹಾಸದ ರಕ್ತಸಿಕ್ತ ಪುಟಗಳಿಗೆ ಇಷ್ಟರಲ್ಲೇ ತಾವು ಸಾಕ್ಷಿಗಳಾಗಲಿದ್ದೇವೆ ಎಂಬ ಒಂದು ಸಂಗತಿ ಮಸುಕು ಮಸುಕಾಗಿ ಅವರಿಗೆ ಮನಸ್ಸಿನ ಯಾವುದೋ ಮೂಲೆಯಲ್ಲಿ ಮೂಡುತ್ತಿತ್ತು.

ಬಾರಕ್‌ಪುರ, ಕ್ರಿ. ಶ. 1856

ಬ್ರಿಟಿಷ್ ಸಮಾಜಶಾಸ್ತ್ರಜ್ಞನೂ, ಈಸ್ಟ್ ಇಂಡಿಯಾ ಕಂಪನಿಯ ನೌಕರನೂ ಆದ ವೇಯ್ನ್ ಆಶ್‌ಬ್ರೂಕ್, ತನ್ನ ಹಿರಿಯ ಅಧಿಕಾರಿ ಕರ್ನಲ್ ಮಾರ್ಕ್ ಸ್ಯಾಂಡರ್ಸ್‌ರನ್ನು, ಒಂದು ಮಧ್ಯರಾತ್ರಿ ಗೌಪ್ಯವಾಗಿ ಭೇಟಿಯಾಗಲು ಬಯಸಿದ. ಯಾವುದೋ ಅಪರೂಪದ ಸತ್ಯವನ್ನು ಕಂಡುಹಿಡಿದಿದ್ದ ಆತ ಅದನ್ನು ತನ್ನ ಹಿರಿಯ ಅಧಿಕಾರಿಗೆ ನಿವೇದಿಸಿಕೊಳ್ಳಬೇಕೆಂದು ಕಾತರಿಸುತ್ತಿದ್ದ. ತನ್ನ ಭಾರತೀಯ ಉದ್ಯೋಗದಲ್ಲಿ ಯಾವೆಲ್ಲ ಸಂಗತಿಗಳನ್ನು ದಾಖಲಿಸಿಕೊಳ್ಳಬೇಕೆಂದು ಅವನನ್ನು ನಿಯೋಜಿಸಲಾಗಿತ್ತೋ ಅದಕ್ಕೆ ತದ್ವಿರುದ್ಧವಾದ ಸಂಗತಿಯೊಂದನ್ನು ಆತ ಪತ್ತೆ ಮಾಡಿದ್ದ. ಅದು ಭೂಮಿಯ ಮೇಲಿನ ಅತಿದೊಡ್ಡ ಸುಳ್ಳಿನ ಕುರಿತಾಗಿತ್ತು. ಅವನ ತಲೆಯೊಳಗೆ ಪ್ರಾರಂಭದಿಂದಲೂ ತುಂಬಲಾಗಿದ್ದ ಆರ್ಯರ ಆಕ್ರಮಣದ ಕುರಿತ ಸಂಗತಿ ಅದಾಗಿತ್ತು. ಅದು ಭಾರತದ ನೆಲಕ್ಕೆ ಬಂದು ಇಲ್ಲಿನ ಸ್ಥಳೀಯರನ್ನು ವಶಪಡಿಸಿಕೊಂಡವರ ಜನಾಂಗೀಯ ಶ್ರೇಷ್ಠತೆಯ ಕುರಿತಾಗಿತ್ತು. ಈತ ಆರ್ಯರಿಗೆ ಸಂಬಂಧಿಸಿದ ನಂಬಲಾಗದ ಸತ್ಯವನ್ನು ಪ್ರಮಾಣಿಸುವ ಶಾಸ್ತ್ರಗ್ರಂಥಗಳನ್ನು ಹಾಗೂ ಇನ್ನಿತರ ರುಜುವಾತುಗಳನ್ನು ಸಂಗ್ರಹಿಸಿದ್ದ. ಗಾಬರಿಗೊಳಿಸುವ ಈ ಹೊಸ ಅನ್ವೇಷಣೆ ಜಗತ್ತಿನ ಧಾರ್ಮಿಕ ಹಾಗೂ ರಾಜಕೀಯ ಸಂಕಥನಗಳ ಅಡಿಪಾಯವನ್ನೇ ಅಲ್ಲಾಡಿಸಿಬಿಡುತ್ತದೆ ಎಂಬುದು ವೇಯ್ನ್‌ಗೆ ತಿಳಿದಿತ್ತು.

ಆದರೆ ಕರ್ನಲ್ ಸ್ಯಾಂಡರ್ಸ್ ವೇಯ್ನ್‌ಗೆ ಆಘಾತವಾಗುವಂತೆ ಅವನಿಗೆ ಅವನ ಹೊಸ ಅನ್ವೇಷಣೆಯ ದುಷ್ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯ ಮಾತುಗಳನ್ನಾಡಿದ್ದ. ಆರ್ಯರ ಕುರಿತು ಕಂಡುಹಿಡಿದಿದ್ದ ಸತ್ಯಸಂಗತಿಗಳನ್ನೆಲ್ಲ ಮರೆತು ಸುಮ್ಮನೆ ಸುಳ್ಳು ಸುಳ್ಳು ವಿಷಯಗಳನ್ನು ದಾಖಲಿಸಿಕೊಂಡಿರು ಎಂದು ಸೂಚಿಸಿದ. ಈ ಹೊಸ ಸತ್ಯದ ಹಿಂದಿರುವ ಶಕ್ತಿ ಮತ್ತು ಇದು ಉಂಟು ಮಾಡುವ ಪರಿಣಾಮಗಳ ಅಂದಾಜು ನಿನಗಿಲ್ಲ ಎಂದು ವೇಯ್ನ್‌ನನ್ನು ಮೂದಲಿಸಿದ. ಸ್ಯಾಂಡರ್ಸ್‌ನ ಮಾತುಗಳನ್ನು ಅನುಮೋದಿಸಲು ವೇಯ್ನ್‌ಗೆ ಸಾಧ್ಯವಾಗಲಿಲ್ಲ, ನಿರಾಶೆಗೊಂಡು ಅಲ್ಲಿಂದ ನಿರ್ಗಮಿಸಿದ. ತನ್ನ ಹಿರಿಯ ಅಧಿಕಾರಿ ಹೇಳಿದಂತೆ ಮಾಡಲು ಅವನ ಅಂತಃಸಾಕ್ಷಿ ಒಪ್ಪಲಿಲ್ಲ. ತಾನು ಪತ್ತೆ ಮಾಡಿದ್ದ ಹೊಸ ಸತ್ಯವನ್ನು 'ಕಲ್ಕತ್ತಾ ಟ್ರಿಬ್ಯೂನ್' ಪತ್ರಿಕೆಯಲ್ಲಿ ಪ್ರಕಟಿಸಲು ಪ್ರಯತ್ನಿಸಿದ. ಮಾರನೆಯ ದಿವಸ ಮುಂಜಾನೆ ವೇಯ್ನ್‌ನ ರಕ್ತಸಿಕ್ತ ಹೆಣವು ರೈಟರ್ಸ್ ಬಿಲ್ಡಿಂಗ್ ಸೆಕ್ರೆಟರಿಯೇಟ್‌ನ ಮುಂಭಾಗದ ಮರದ ಮೇಲೆ ನೇತಾಡುತ್ತಿತ್ತು. ಈ ದುಷ್ಕೃತ್ಯವನ್ನು ಎಸಗಿದ್ದು ಇಬ್ಬರು ಭಾರತೀಯ ಸಿಪಾಯಿಗಳು ಎಂದು ಪತ್ರಿಕೆಗಳು ತೀರ್ಪು ನೀಡಿದವು. ಆದರೆ ಸತ್ಯ ಬೇರೆಯದೇ ಆಗಿತ್ತು ಹಾಗೂ ಅದು ಭಯಾನಕವಾದುದಾಗಿತ್ತು. ಭವಿಷ್ಯವಾಣಿ ನುಡಿದಿದ್ದ ರಕ್ತ ಪಿಪಾಸೆ ಇಷ್ಟರಲ್ಲೇ ತಲೆಯೆತ್ತಲಿತ್ತು.

# ಪೀಠಿಕೆ

**ಕ್ರಿ.ಪೂ. 1700**

ಮೈಲಿಗಟ್ಟಲೆ ದೂರದವರೆಗೆ ಸುತ್ತಮುತ್ತಲೂ ಅವನೊಬ್ಬನನ್ನು ಬಿಟ್ಟರೆ ಬೇರೆ ಮತ್ತೊಂದು ನರಪಿಳ್ಳೆ ಇರಲಿಲ್ಲ. ಮಳೆ ಗಾಳಿಯಿಂದ ತುಂಬಿದ್ದ ಆ ಕಾರ್ಗತ್ತಲ ರಾತ್ರಿಯಲ್ಲಿ ಅವನಿಗೂ ಸುತ್ತ ಮುತ್ತ ಏನೊಂದೂ ಕಾಣಿಸುತ್ತಿರಲಿಲ್ಲ. ಅವನ ರಕ್ತ, ಬೆವರು, ಕಣ್ಣೀರಿನೊಂದಿಗೆ ಕಾಲವಲ್ಲದ ಕಾಲದಲ್ಲಿ ಸುರಿಯುತ್ತಿದ್ದ ಮಳೆನೀರು ಬೆರೆತು ಆ ಕೆಸರು ರಾಡಿಯಿಂದ ಅವನ ಶರೀರವೆಲ್ಲ ಕೆಸರಾಗಿತ್ತು. ಆ ಅಂಧಕಾರದಲ್ಲಿ ಬಕ್ಕತಲೆಯ, ಬೆತ್ತಲೆ ಎದೆಯ ಆ ಬ್ರಾಹ್ಮಣ ಬೆನ್ನಿಗೆ ಕೊಡಲಿ ಏರಿಸಿಕೊಂಡು ಪ್ರಯಾಸದಿಂದ ನಡೆದು ಬರುತ್ತಿದ್ದ. ಕಂಚು ಮತ್ತು ಇಟ್ಟಿಗೆಗಳಿಂದ ಆಗಷ್ಟೇ ನಿರ್ಮಿಸಲಾಗಿದ್ದ ಕಂಬವನ್ನು ಹಿಡಿದು ನಿಲ್ಲಿಸಿದ್ದ ದಪ್ಪ ಗಾತ್ರದ ಸೆಣಬಿನ ಹಲವು ಹಗ್ಗಗಳ ಪೈಕಿ ಕೊನೆಯ ಪಕ್ಷ ಒಂದು ಹಗ್ಗವನ್ನಾದರೂ ಕತ್ತರಿಸಿ ಹಾಕಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದ. ನದಿಯ ಹರಿವನ್ನು ಬೇರೆಯ ದಿಕ್ಕಿಗೆ ತಿರುಗಿಸುವ ಉದ್ದೇಶದಿಂದ ಕಲ್ಲು,

ಇಟ್ಟಿಗೆ, ಲೋಹ, ಮರದ ತುಂಡುಗಳಿಂದ ಆ ಬೃಹತ್ ಗಾತ್ರದ ಕಟ್ಟೆಯನ್ನು ನಿರ್ಮಿಸಲಾಗಿತ್ತಾದರೂ ಅದು ಸಮುದ್ರದಲ್ಲಿ ಹುಟ್ಟುವ ಸುನಾಮಿ ಅಲೆಗಳನ್ನೂ ಹೆದರಿಸಿ ಅಂಕೆಯಲ್ಲಿ ಇಟ್ಟುಕೊಳ್ಳಬಲ್ಲ ಕಟ್ಟೆಯಂತೆ ದಿಟ್ಟತನದಿಂದ ಸೆಟೆದು ನಿಂತಿತ್ತು. ಅಲ್ಲದೆ ನದಿಯೇನೂ ಸಾಮಾನ್ಯ ಹೊಳೆಯಾಗಿರಲಿಲ್ಲ. ಸಮುದ್ರವನ್ನು ಹೋಲುವ ರಭಸ ಮತ್ತು ವಿಸ್ತಾರ ಪಡೆದಿತ್ತು. ನದಿಯ ಭೋರ್ಗರೆತದ ಸಮೀಪದಲ್ಲಿ ಮೈಮೇಲೆ ಭೂತ ಹಿಡಿದಂತೆ ತನಗೆ ತಾನೇ ಏನೇನೋ ಮಾತಾಡಿಕೊಳ್ಳುತ್ತಿದ್ದ ಆ ವ್ಯಕ್ತಿ ತಪಸ್ಸು ಮತ್ತು ವೈದಿಕ ಜೀವನ ಪದ್ಧತಿಯಿಂದ ದೃಢಗೊಳಿಸಿಕೊಂಡಿದ್ದ ತನ್ನ ಶರೀರದಲ್ಲಿ ಅಳಿದುಳಿದಿದ್ದ ಅಷ್ಟಿಷ್ಟು ಶಕ್ತಿಯನ್ನೆಲ್ಲ ವಿನಿಯೋಗಿಸುತ್ತಿದ್ದ. ಎರಡೂ ಕೈಗಳಿಂದ ರಕ್ತ ಜಿನುಗುತ್ತಿದ್ದರೂ ಲೆಕ್ಕಿಸದೆ ಕಬ್ಬಿಣದ ತಂತಿಯನ್ನು ಹೋಲುತ್ತಿದ್ದ ಆ ಹಗ್ಗಕ್ಕೆ ಕೊಡಲಿಯಿಂದ ಒಂದೇ ಸಮನೆ ಪೆಟ್ಟುಗಳನ್ನು ನೀಡುತ್ತಿದ್ದ. ಉಸಿರು ತೆಗೆದುಕೊಳ್ಳಲೂ ಆಗದಷ್ಟು ಆಯಾಸವಾದ ಮೇಲೆ ಕೊಡಲಿಯನ್ನು ಪಕ್ಕಕ್ಕೆಸೆದು ನಿಂತಲ್ಲೇ ತಲೆಯನ್ನು ಹಿಂದಕ್ಕಿಕ್ಕಿ ಆಕಾಶಕ್ಕೆ ಮುಖ ಮಾಡಿದ. ದಪ್ಪ ಗಾತ್ರದ ಮಳೆ ಹನಿಗಳು ಕೋಪದಿಂದ ಅವನ ಮುಖಕ್ಕೆ ರಪರಪನೆ ಹೊಡೆಯುತ್ತಿದ್ದವು. ಅವನ ಮುಖಕ್ಕೆಲ್ಲ ಅಂಟಿಕೊಂಡಿದ್ದ ಮಣ್ಣು ಮತ್ತು ಕೆಸರನ್ನು ತೊಡೆದು ಹಾಕುತ್ತಿದ್ದವು. ಆ ವರ್ಷಧಾರೆಯ ನಿರ್ದಯ ತಾಡನವನ್ನು ತಾಳಲಾರದೆ ಗಟ್ಟಿಯಾಗಿ ಚೀರಿದ. ಆ ಚೀರುವಿಕೆ ಪ್ರಾಯಶಃ ಇತ್ತೀಚೆಗೆ ಸೂತಕಗೊಂಡಿದ್ದ ಅವನ ಅಂತರಾತ್ಮದ ವಿವರಿಸಲಾಗದ ಗೋಳನ್ನು ಮೇಲಿನ ಲೋಕದ ದೇವತೆಗಳ ಕಿವಿಗೆ ಬೀಳಿಸುವ ಪ್ರಯತ್ನವಾಗಿತ್ತು. ಆದರೆ ಆ ಸೂತಕ ಮತ್ತು ಆ ಗೋಳು ಬಹಳ ತಡವಾಗಿ ಅವನ ಅರಿವಿಗೆ ಬಂದಿತ್ತು. ಅವನು ಎಸಗಿದ್ದ ಕೃತ್ಯಗಳಿಗೆ ಮೇಲಿನ ಲೋಕದ ದೇವತೆಗಳು ಕೋಪಗೊಂಡಿದ್ದರು. ಇನ್ನು ಅವರು ಅವನನ್ನು ಅಥವಾ ಇನ್ನಾರನ್ನೇ ಆದರೂ ಕ್ಷಮಿಸುವ ಪ್ರಶ್ನೆ ದೂರದ ಮಾತಾಗಿತ್ತು. ತನ್ನ ಪುಟ್ಟ ಕೊಡಲಿ ಹಿಡಿದು ಹಗ್ಗವನ್ನು ಕತ್ತರಿಸುವ ಪ್ರಯತ್ನವನ್ನು ಮತ್ತಷ್ಟು ತೀವ್ರವಾಗಿ ಮತ್ತೆ ಮುಂದುವರಿಸಿದ. ಒಂದೇ ಒಂದು ಹಗ್ಗವನ್ನು ಕತ್ತರಿಸಲು ಒಂದು ಗಂಟೆಯಿಂದ ಒಂದೇ ಸಮನೆ ಪ್ರಯತ್ನಿಸುತ್ತಿದ್ದೇನೆ ಎಂದು ಅವನಿಗೆ ಗೊತ್ತಿತ್ತು. ಅವನದೇ ಸೂಚನೆಯ ಮೇರೆಗೆ ಆ ಹಗ್ಗವನ್ನು ವಿಶೇಷ ಕೌಶಲ್ಯದಿಂದ ಹೆಣೆಯಲಾಗಿತ್ತು. ಆ ಬೃಹತ್ ಅಣೆಕಟ್ಟೆಗೆ ಆಧಾರವಾಗಿ ಇಟ್ಟಿಗೆ, ಕಂಚು ಮತ್ತು ಕಲ್ಲಿನಿಂದ ಮಾಡಲಾಗಿದ್ದ 998ಕ್ಕೂ ಹೆಚ್ಚು ಕಂಬಗಳನ್ನು ನಿಲ್ಲಿಸಲಾಗಿತ್ತು. ಒಂದೊಂದು ಕಂಬವನ್ನೂ ಇಂತಹ ನೂರಾರು ಹಗ್ಗಗಳು ಹಿಡಿದಿಟ್ಟುಕೊಂಡಿದ್ದವು. ಇವೆಲ್ಲ ಅವನಿಗೆ ಗೊತ್ತಿಲ್ಲದೆ ಇರಲಿಲ್ಲ. ಸಾವಿರಾರು ಕೂಲಿಕಾರರು ಹಗಲು ರಾತ್ರಿ ಎನ್ನದೆ ವಾರಗಟ್ಟಲೆ ಶ್ರಮಪಟ್ಟರೆ ಮಾತ್ರ ಇಂತಹ ಸಾವಿರಾರು ಹಗ್ಗಗಳಿಂದ ನಿಂತಿದ್ದ ಆ ಬೃಹತ್ ಕಟ್ಟೆಯನ್ನು

ಕೆಡವಲು ಸಾಧ್ಯ ಎಂಬುದು ಅವನಿಗೆ ತಿಳಿದಿತ್ತು.. ಅವನದೇ ವಿಶೇಷ ಮುತುವರ್ಜಿ ಮತ್ತು ಮಾರ್ಗದರ್ಶನದ ಮೇರೆಗೆ 999 ವಿಶೇಷವಾದ ದೃಢವಾದ ಕಂಬಗಳನ್ನು ನಿಲ್ಲಿಸಲಾಗಿತ್ತು. ಹೀಗಿರುವಾಗ ಇವನು ಏನು ಮಾಡುತ್ತಿದ್ದಾನೆ? ಇವನಿಗೇನಾದರೂ ತಲೆ ಕೆಟ್ಟಿದೆಯೇ? ಆ ದೈತ್ಯಾಕಾರದ ಕಟ್ಟೆಯನ್ನು ಒಂದಿಂಚಿನಷ್ಟೂ ಕದಲಿಸಲು ಸಾಧ್ಯವಿಲ್ಲ ಎಂದು ಅವನಿಗೆ ಚೆನ್ನಾಗಿಯೇ ಗೊತ್ತಿತ್ತು. ಹಾಗಿದ್ದೂ ಅವನು ಆ ಹಗ್ಗಗಳ ಮೇಲೆ ತನ್ನ ಕೊಡಲಿಯನ್ನು ಒಂದೇ ಸಮನೆ ವ್ಯರ್ಥವಾಗಿ ಪ್ರಯೋಗಿಸುತ್ತಿದ್ದ.

ಅವನು ನಿಂತಿದ್ದ ಜಾಗದಿಂದ ಮೈಲಿಗಟ್ಟಲೆ ವಿಸ್ತಾರದವರೆಗೂ ಒಂದೇ ಒಂದು ನರಹುಳು ಸಂಚರಿಸುತ್ತಿರಲಿಲ್ಲ. ತನ್ನ ಜನರಿಂದ ಹಲವು ದಶಕಗಳಿಂದ ಪ್ರತ್ಯಕ್ಷ ದೇವತೆಯಂತೆ ಪೂಜೆಗೊಳ್ಳುತ್ತಿದ್ದ, ಹರಪ್ಪ ನಗರದ ಮುಂಬೆಳಗು ಎಂದು ಜನರಿಂದ ಸ್ತುತಿಸಲ್ಪಡುತ್ತಿದ್ದ ವಿವಸ್ವಾನ್ ಪೂಜಾರಿ ಅಂದು ಮಧ್ಯರಾತ್ರಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ಒಂದು ಭೂತದಂತೆ ನಿಂತಿದ್ದ.

ಮುಂದೊದಗಲಿದ್ದ ಘೋರ ದುರಂತದ ಸರಣಿಯನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ಖಾತರಿಯಾದ ಮೇಲೆ ಅವನು ತೀವ್ರವಾದ ವೇದನೆ ಮತ್ತು ಪಶ್ಚಾತ್ತಾಪದಿಂದ ಖಿನ್ನನಾದ. ತನ್ನ ಅಳುವನ್ನು, ತನಗೆ ತಾನೇ ಮಾತನಾಡಿಕೊಳ್ಳುವುದನ್ನು ಮುಂದುವರಿಸುತ್ತಲೇ ಹಗ್ಗ ಕತ್ತರಿಸುವ ಕೆಲಸವನ್ನೂ ಮುಂದುವರಿಸಿದ. ಕೊನೆಗೆ ಅವನು ನಿರೀಕ್ಷಿಸಿದ ಶಬ್ದ ಅವನ ಕಿವಿಗೆ ಬಿತ್ತು.

ಅವನ ನಿರೀಕ್ಷೆ ದಿಟವಾಗತೊಡಗಿತು.

ನದಿಯ ಭೋರ್ಗರೆತದಲ್ಲಿ ಅಪಶಕುನದ ಧ್ವನಿ ಇತ್ತು, ನದಿಯ ಯದ್ವಾತದ್ವಾ ಭೋರ್ಗರೆತಕ್ಕೆ ಅವನ ಶರೀರದೊಳಗಿನ ರಕ್ತವೂ ಯದ್ವಾ ತದ್ವಾ ಪರಿಚಲನೆಯಾಗತೊಡಗಿತು. ಹಡೆದ ತಾಯಿಯಂತೆ ಪ್ರೀತಿ, ಪೋಷಣೆ, ಔದಾರ್ಯ ತೋರಿಸುತ್ತಿದ್ದ ನದಿ ರಕ್ತಪಿಪಾಸುವಿನ ಅವತಾರ ತಳೆದಿತ್ತು. ತಾನೇ ಸಲಹಿ ತನ್ನ ಮಕ್ಕಳ ರಕ್ತ ಹೀರಲು ಹಾತೊರೆಯಿತು. ಜ್ಞಾನದ ಧಾರೆಯೆಂದೇ ಸ್ತುತಿಗೊಳ್ಳುತ್ತಿದ್ದ ನದಿಗೆ ಅವಳ ಪ್ರೀತಿಪಾತ್ರನಾದ ಅವಳ ಪುತ್ರನೇ ಅಂದು ದ್ರೋಹವೆಸಗಿದ್ದ.

ಹಿಂದೊಮ್ಮೆ ಅಜೇಯನೆನಿಸಿದ್ದ, ಧರ್ಮಭೀರುವೆನಿಸಿದ್ದ ವಿವಸ್ವಾನ್ ಪೂಜಾರಿ ಕೈಯಿಂದ ಅವನ ಕೊಡಲಿ ಜಾರಿ ಕೆಳಗೆ ಬಿದ್ದಿತು. ಅದು ಕೆಳಗೆ ಕೆಸರಿನ ಮಡುವಿನಲ್ಲಿ ಬಿದ್ದ ಶಬ್ದವೂ ಅವನ ಕಿವಿಗೆ ಕೇಳಿಸಿತು. ಅವನ ಶರೀರದ ರಕ್ತವೆಲ್ಲ ಹೆಪ್ಪುಗಟ್ಟಿದಂತಾಗಿ ಅವನು ನದಿಯ

ಭೋರ್ಗರೆಯುತ್ತಿದ್ದ ದಿಕ್ಕಿನತ್ತ ಮೂಕನಂತೆ ನೋಡತೊಡಗಿದ. ನದಿ ಹುಚ್ಚು ಹಿಡಿಸಿಕೊಂಡ ತಾಯಿಯಂತೆ ತನ್ನ ಪೈಶಾಚಿಕ ರೂಪವನ್ನು ತಳೆದಳು. ತಕ್ಷಣ ಅವನಿಗೆ ಅರ್ಥವಾಯಿತು. ಅವಳ ಬಲಿಪೀಠದ ಮೇಲೆ ತನ್ನ ನೆತ್ತರೇ ಮೊದಲ ನೈವೇದ್ಯವಾಗಲಿದೆ ಎಂದು ಅವನಿಗೆ ಗೊತ್ತಾಯಿತು. ಇದು ಹೀಗಾಗುತ್ತಿರುವುದೇ ಸರಿ ಎಂದು ಅವನ ಮನಸ್ಸಿಗೆ ಅನ್ನಿಸಿತು.

ಆ ಅನಿಸಿಕೆ ಮೂಡಿದೊಡನೆ ಅವನ ಮನಸ್ಸು ನಿರಾಳವಾಯಿತು. ಶರೀರದಾದ್ಯಂತ ನೆಮ್ಮದಿ ಸಂಚಲನವಾದಂತೆ ಅನುಭವವಾಯಿತು. ಅವನ ಅಂತರಾತ್ಮದಲ್ಲಿ ಯಾವುದೋ ಭರವಸೆಯ ಹೊಂಗಿರಣ ಮೂಡಿತು. ಪ್ರಾಯಶಃ ತನ್ನ ತಾಯಿ ತನ್ನ ಜೀವವನ್ನು ಬಲಿ ಪಡೆದು ನಗರದ ಲಕ್ಷಾಂತರ ಮಂದಿಯನ್ನು ಸುಮ್ಮನೆ ಬಿಟ್ಟುಬಿಡುವಳೆಂದು ಅವನಿಗೆ ಅನ್ನಿಸಿರಬೇಕು. ಒಡನೆಯೇ ಅವನು ಮಂಡಿಯೂರಿ ಕುಳಿತ; ಶರಣಾಗತನಾಗುವಂತೆ ಅಂಗೈ ಗಗನದತ್ತ ಮುಖ ಮಾಡುವಂತೆ ಎರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದ. ಬಹಳ ವಿಕೃತವಾಗಿ ಗಂಟು ಗಂಟಾಗಿ ಪರಿಣಮಿಸಿದ್ದ ಅವನ ಅಂತರಾತ್ಮವನ್ನು ಪರಿಶುದ್ಧಗೊಳಿಸಲೆಂಬಂತೆ ಆಕಾಶದಿಂದ ಧರೆಗಿಳಿಯುತ್ತಿದ್ದ ಮಳೆ ನೀರು ಅವನ ಚಾಚಿದ ಕೈಗಳನ್ನು, ಗಾಯಗೊಂಡಿದ್ದ ದೇಹವನ್ನು ತೊಳೆಯಿತು. ವಿವಸ್ವಾನ್ ಪೂಜಾರಿಯ ಸ್ಥಿತಿಗೆ ಮರುಗಿ ಅವನಿಗೆ ಕೊನೆಯ ಸ್ನಾನ ಮಾಡಿಸುತ್ತಿದೆ ಎಂಬಂತೆ ಭಾಸವಾಗುತ್ತಿತ್ತು.

‘‘ತಾಯಿ, ನಾನು ನಿನ್ನ ಕೋಪಕ್ಕೆ ಗುರಿಯಾಗಿದ್ದೇನೆಂದು ನಾನು ಬಲ್ಲೆ. ನನ್ನ ಜೀವವನ್ನು ತೆಗೆದುಕೋ! ಇದೋ ನನ್ನನ್ನು ನಿನಗೆ ಅರ್ಪಿಸಿಕೊಳ್ಳುತ್ತಿದ್ದೇನೆ!’’ ಎಂದು ನುಡಿದ. ಆ ನುಡಿಗಳನ್ನು ಕೇಳಿ ರಾತ್ರಿಯ ಆಕಾಶ ಸಿಡಿಮಿಡಿಗೊಂಡಿತೋ ಎಂಬಂತೆ ಗಗನವು ಗಂಭೀರವಾಗಿ ಗುಡುಗಿತು. ಆ ಗುಡುಗಿನ ಸದ್ದು ಸ್ವರ್ಗಲೋಕದ ದೇವತೆಗಳು ಭ್ರಷ್ಟನಾದ ದೇವತೆಯ ಕಟ್ಟಕಡೆಯ ಮೊರೆಯನ್ನು ಆಲಿಸಲು ನಿರಾಕರಿಸುತ್ತಿರುವರು ಎಂಬಂತಿತ್ತು.

ಅವನು ಮತ್ತೊಮ್ಮೆ ಮೊರೆಯಿಟ್ಟ. ಈ ಸಲ ಅವನ ಮೊರೆ ರೋದನದಂತಿತ್ತು. ‘‘ತಾಯಿ ಪದಚ್ಯುತನಾದ ನಿನ್ನ ಮಗನ ಬಿನ್ನಹ ನಿನಗೆ ಕೇಳಿಸದೇ? ನನ್ನ ಜೀವವನ್ನು ಬೇಕಾದರೆ ತೆಗೆದುಕೋ. ಆದರೆ ಬೇರೆ ಇತರರನ್ನು ಕ್ಷಮಿಸಿಬಿಡು. ನಿನ್ನ ಮಗ ಮಾಡಿರುವ ಪಾಪಕರ್ಮವನ್ನು ಅವರು ಮಾಡಿಲ್ಲ. ಇದೋ ನನ್ನನ್ನು ಒಪ್ಪಿಸಿಕೋ’’

ಆಕಾಶ ಮತ್ತೆ ಕಣ್ಬಿಟ್ಟಿತು. ಅರೆಕ್ಷಣದಲ್ಲಿ ಇರುಳು ಹಗಲಾಯಿತೋ ಎಂಬಂತೆ ಗಗನದಲ್ಲಿ ಮಿಂಚು ಹೊಳೆಯಿತು. ನಿಶ್ಯಬ್ದವಾದ ಆ ಮಿಂಚು ವಿವಸ್ವಾನ್ ಪೂಜಾರಿಯ ಬೆವರಿನಿಂದ

ನೆನೆದ ರಕ್ತಸಿಕ್ತವಾದ ವಿರೂಪವಾದ ಮುಖವನ್ನೊಮ್ಮೆ ಬೆಳಗಿಸಿತು. ಇದಾದ ಕೆಲವು ಕ್ಷಣಗಳ ನಂತರ ಆಕಾಶವನ್ನು ಬೆಳಗುವ ಸೂರ್ಯನೇ ಸ್ಫೋಟಗೊಳ್ಳುತ್ತಿರುವನೋ ಎಂಬಂತೆ ಕಾರ್ಮೋಡ ತುಂಬಿದ ಆಕಾಶವನ್ನು ಗುಡುಗಿನ ಸದ್ದು ಆವರಿಸಿತು.

ಆ ಸದ್ದಿನಲ್ಲಿ ವಿವಸ್ವಾನ್ ಪೂಜಾರಿಯ ಬಿನ್ನಹವನ್ನು ದೇವತೆಗಳು ನಿರಾಕರಿಸುತ್ತಿರುವ ಧ್ವನಿ ಇತ್ತು.

ಇದ್ದಕ್ಕಿದ್ದಂತೆ ವಿವಸ್ವಾನ್ ಪೂಜಾರಿಯ ಮುಖಕ್ಕೆ ಹೊಡೆಯುವಂತೆ ಬಲವಾಗಿ ಗಾಳಿ ಬೀಸಿತು. ದೂರದ ಅಣೆಕಟ್ಟೆಯ ಆಚೆ ನದಿಯ ಬೃಹತ್ ಅಲೆಯೊಂದು ಪರ್ವತಾಕಾರ ತಳೆದಂತೆ ಗಗನದೆತ್ತರಕ್ಕೆ ಹಾರಿತು ಹೀಗೆ ಚಿಮ್ಮಿದ ನೀರು ರಭಸವಾಗಿ ಅವನು ಮಂಡಿಯೂರಿ ಕುಳಿತಿದ್ದ ಜಾಗದತ್ತ ಧಾವಿಸಿತು. ನೀರಿನಿಂದ ಮಾಡಿದ ದೊಡ್ಡಗಾತ್ರದ ಕ್ರೂರ ಸರಿಸೃಪವೊಂದು ತನ್ನ ಬಲಿಪಶುವಿನತ್ತ ಮುಖ ಮಾಡಿ ಹರಿದು ಬರುತ್ತಿರುವಂತೆ ಭಾಸವಾಯಿತು. ಪ್ರವಾಹದ ಭೋರ್ಗರೆತ ಕೆಲನಿಮಿಷಗಳ ಹಿಂದೆ ಆಕಾಶದಲ್ಲಿ ಮೊಳಗಿದ ಗುಡುಗಿನ ಆರ್ಭಟಕ್ಕಿಂತಲೂ ಮಿಗಿಲಿನದ್ದಾಗಿತ್ತು. ಪರ್ವತಾಕಾರದ ಸುಂಟರ ಗಾಳಿಯೊಂದು ಆ ಕತ್ತಲೆಯಲ್ಲೂ ತನ್ನ ಛಾಯೆಯನ್ನು ನೆಲದ ಮೇಲೆ ಮೂಡಿಸಿತ್ತು. ವಿವಸ್ವಾನ್ ಪೂಜಾರಿ ಕಣ್ಣೆವೆಯಿಕ್ಕದಂತೆ ಆ ದೃಶ್ಯವನ್ನು ನೋಡುತ್ತಿದ್ದ. ಅವನು ಮೇರು ಪರ್ವತದೆದುರು ಸಣ್ಣ ಇರುವೆ ಕುಳಿತಂತೆ ಕಾಣಿಸುತ್ತಿದ್ದ. ಆಕಾಶದೆತ್ತರದ ಸುನಾಮಿಯ ರೂಪ ತಳೆದಿದ್ದ ಅವನ ತಾಯಿ ಅವನನ್ನು ಪುನಃ ತನ್ನ ಗರ್ಭದೊಳಗೆ ಸೇರಿಸಿಕೊಳ್ಳಲು ಕೆಲವೇ ಕ್ಷಣಗಳ ಅಂತರದಲ್ಲಿದ್ದಳು.

ವಿವಸ್ವಾನ್ ಪೂಜಾರಿ ಕೆಲವು ದಿವಸಗಳ ಹಿಂದೆ ತನ್ನ ಸಂಯಮ, ಪೂರ್ತಿಯಾಗಿ ಕಳೆದುಕೊಂಡಿದ್ದ. ತನ್ನ ಕುರುಡು ಪ್ರತೀಕಾರ ತೀರಿಸಿಕೊಳ್ಳಲು ಜೀವನವಿಡೀ ಸಂಪಾದಿಸಿದ್ದ ಘನತೆಯನ್ನು ಕ್ಷಣಾರ್ಧದಲ್ಲಿ ಕಳೆದುಕೊಂಡು ಬಿಟ್ಟಿದ್ದ. ಏನೇ ಎಷ್ಟಾದರೂ ಅವನು ಒಬ್ಬ ದೇವತೆ. ಯೋಗಸಾಧನೆಯ ಉನ್ನತ ನೆಲೆಗಳನ್ನು ತಲುಪಿದ ಯೋಗಿಗಳ ಹಾಗೆ ಅವನು ತನ್ನ ಚಿತ್ತವನ್ನು ಕುಂಡಲಿನಿಯಲ್ಲಿ ಅನಾಯಾಸವಾಗಿ ಏಕಾಗ್ರಗೊಳಿಸಿದ. ಹೃದಯದ ಬಡಿತವನ್ನು ನಿಲ್ಲಿಸಿದ. ತನ್ನ ಮೃಣ್ಮಯ ಶರೀರವನ್ನು ಮರಣಕ್ಕೆ ಸಜ್ಜುಗೊಳಿಸಿದ. ಹೀಗೆ ಸಮಾಧಿಸ್ಥನಾಗಿ ನೀರಿನೊಂದಿಗೆ ಕೊಚ್ಚಿಕೊಂಡು ಹೋಗುವಾಗಲೂ ಅವನು ಅಂತರಂಗದ ಸಂಯಮವನ್ನು ಕಾಯ್ದುಕೊಂಡು ಮನದಲ್ಲೇ ತನ್ನ ತಾಯಿಯನ್ನು ಪ್ರಾರ್ಥಿಸಿದ "ಅಮ್ಮಾ, ಅವರನ್ನು ಕ್ಷಮಿಸಿಬಿಡು, ನಾನು ಮಾಡಿದ ಪಾಪಕ್ಕೆ ಅವರನ್ನು ಸರ್ವನಾಶ ಮಾಡಬೇಡ. ಅವರನ್ನು ಬಿಟ್ಟುಬಿಡು ತಾಯಿ!". ಬೃಹತ್ ಗಾತ್ರದ ಚಂಡ ಮಾರುತವು ಒಣಗಿದ

ತರಗೆಲೆಯನ್ನು ನಾಮಾವಶೇಷ ಮಾಡುವಂತೆ ಆ ಪ್ರಕ್ಷುಬ್ಧ ನದಿಯು ದೇವತೆಯಾದ ವಿವಸ್ವಾನ್ ಪೂಜಾರಿಯನ್ನು ತನ್ನ ಹೊಟ್ಟೆಯೊಳಗೆ ಹಾಕಿಕೊಂಡಿತು. ಗಗನ ಮಂಡಲದ ದೇವತೆಗಳು, ಕೊಲೆಪಾತಕಿಯಾದ ನೆತ್ತರ ನದಿ, ಕಾರ್ಗತ್ತಲೆ, ಇಂದ್ರನ ವಜ್ರ, ಆ ವಿಶಾಲವಾದ ಭೂಭಾಗ, ನಿರ್ದಯವಾದ ಮಳೆ, ಬಿರುಗಾಳಿ ಎಲ್ಲವೂ ತನ್ನ ಕಾಲಮಾನದ ಅತ್ಯಂತ ಶ್ರೇಷ್ಠನಾದ, ಉದಾತ್ತ ಚರಿತನಾದ ವ್ಯಕ್ತಿಯ ಅಂತ್ಯಕ್ಕೆ ಸಾಕ್ಷಿಯಾದವು.

ಆದರೆ ವಿವಸ್ವಾನ್ ಪೂಜಾರಿಯ ಅಂತ್ಯದೊಂದಿಗೆ ಅವನ ಕೃತ್ಯಗಳಿಂದಾಗಿ ಮುಂದೆ ಒದಗಬಹುದಾಗಿದ್ದ ದುಷ್ಪರಿಣಾಮಗಳ ಅಂತ್ಯವಾಗಲಿಲ್ಲ. ಅವನ ಅಂತ್ಯ ಆ ದುಷ್ಟ ಪರಿಣಾಮಗಳಿಗೆ ಒಂದು ಪ್ರಾರಂಭವಾಯಿತು, ಒಂದು ನಾಂದಿಯಾಯಿತು ಅಷ್ಟೇ. ದ್ವೇಷ ವಂಚನೆ, ಕುತಂತ್ರ, ಹಿಂಸಾಚಾರ, ಯುದ್ಧ ಇವೇ ಮುಂತಾದ ವೇಷದಲ್ಲಿ ವಿವಸ್ವಾನ್ ಪೂಜಾರಿ ಇನ್ನೂ ನೂರ್ಕಾಲ ಬಾಳಲಿದ್ದ. ಯಾವ ದೇವರುಗಳು ಅವನನ್ನು ನಿರ್ದಾಕ್ಷಿಣ್ಯವಾಗಿ ಉಚ್ಚಾಟಿಸಿದರೋ ಅದೇ ದೇವತೆಗಳ ಹೆಸರಿನಲ್ಲಿ ಅವನು ಇಡೀ ಆರ್ಯಾವರ್ತವನ್ನು ಮಾತ್ರವಲ್ಲ, ಇಡೀ ಜಗತ್ತನ್ನು ಕೊನೆಯಿರದ ಕೊಲೆ, ರಕ್ತಪಾತಗಳಿಂದ ತುಂಬಿದ. ಅವನ ಸಾವು ಕೂಡ ಅವನನ್ನು ಮತ್ತು ಸಮಸ್ತ ಮನುಷ್ಯಕುಲವನ್ನು ಆ ಶಾಪದಿಂದ ಪಾರು ಮಾಡಲಿಲ್ಲ.

ನದಿಯು ಮಾತ್ರ ಏನೂ ಆಗಿಲ್ಲವೆಂಬಂತೆ ತನ್ನ ಪಾತ್ರದೊಳಗೆ ಹರಿಯುತ್ತಲಿತ್ತು. ಸರಸ್ವತಿ ನದಿಯು ಸುಮ್ಮನೆ ಹರಿಯುತ್ತಿರಲಿಲ್ಲ; ಶಕ್ತಿಶಾಲಿ ನಗರವಾಗಿದ್ದ ಹರಪ್ಪವನ್ನು ಜೊತೆಗೆ ಅಲ್ಲಿ ವಾಸಿಸುತ್ತಿದ್ದ ಪ್ರತಿಯೊಬ್ಬನನ್ನೂ ಆಹುತಿ ತೆಗೆದುಕೊಳ್ಳಲು ಹವಣಿಸುತ್ತಿತ್ತು.